ದಿನಾಂಕ 18-06-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಅಜ್ಜನ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ ವಾರಸುದಾರರು ಪಾಲು ವಾಟ್ನಿಯಂತೆ ಪ್ರತ್ಯೇಕ ಕಬ್ಜಾದಲ್ಲಿರುವ ಕಾರಣ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ ಪಾಲು ವಾಟ್ನಿ 2014 ರಲ್ಲಿ ಆಗಿರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮೌಕಿಕ ಪಾಲು ವಾಟ್ನಿಯಾಗಿದ್ದು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ಪಾಲು ವಾಟ್ನಿಯಾಗದ ಕಾರಣ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ದಾವಾ ಆಸ್ತಿಯ ಸರ್ವೆ ನಂ.50/ಅ/1ಕ ಆಗಿರುತ್ತದೆ. ಸದರಿ ಸರ್ವೆ ನಂಬರ್ ನಲ್ಲಿ ಒಟ್ಟು ಎಷ್ಟು ಭಾಗಗಳು ಇವೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಎಷ್ಟು ಪ್ಲಾಟುಗಳು ಆಗಿರುತ್ತವೆ ಮತ್ತು ಕೆಜೆಪಿ ವರದಿಯಾಗಿರುವ ಕುರಿತು ನಾನು ತಿಳಿದುಕೊಂಡಿರುವುದಿಲ್ಲ ಆದರೆ ದಾವಾ ಆಸ್ತಿಯ ಕುರಿತು ಮಾತ್ರ ನನಗೆ ಮಾಹಿತಿ ಇರುತ್ತದೆ. 1962 ನೇ ಸಾಲಿನಲ್ಲಿ ದಾವಾ ಆಸ್ತಿಯ ಕುರಿತು ಕೆಜೆಪಿ ಆಗಿರುತ್ತದೆ. ಸದರಿ ವಿಷಯದ ಕುರಿತು ನಕಾಶೆಯನ್ನು ನಾನು ನೋಡಿರುವುದಿಲ್ಲ. ಸರ್ವೆ ನಂ.50/ಅ/1ಕ ರಲ್ಲಿ ಒಟ್ಟು 70 ಪ್ಲಾಟುಗಳು ಇವೆ ಎಂದರೆ ಸರಿ. ಸದರಿ ಪ್ಲಾಟುಗಳಲ್ಲಿ ನಮ್ಮ ಅಜ್ಜನ ಕುಟುಂಬಕ್ಕೆ ಒಟ್ಟು 3 ಪ್ಲಾಟುಗಳು ಇವೆ ಎಂದರೆ ಸರಿ.

3. 1979 ರಲ್ಲಿ ಸರ್ವೆ ನಂ.50/ಅ/1ಕ ಆಸ್ತಿಯ ನಕಾಶೆ ತಯಾರಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಸದರಿ ನಕಾಶೆಯನ್ನು ತೋರಿಸಲಾಗಿ ಪ್ಲಾಟ್ ನಂ.1 ನ್ನು ತನ್ನ ಆಸ್ತಿ ಎಂದು ಗುರುತಿಸಿದ್ದು ಸದರಿ ನಕಾಶೆಯನ್ನು **ನಿಡಿ 2** ಎಂದು ಹಾಗೂ ಸಾಕ್ಷಿಯು ಗುರುತಿಸಿದ ಪ್ಲಾಟ್ ನಂ.1 ರ ಭಾಗವನ್ನು **ನಿಡಿ 2ಎ** ಎಂದು ಗುರುತಿಸಲಾಯಿತು. ಸದರಿ ನಕಾಶೆಯಲ್ಲಿ ತೋರಿಸಿರುವ ಪ್ಲಾಟ್ ನಂ.63 ಮತ್ತು 64 ರ ಪ್ಲಾಟ್ ಗಳು ಸಹ ನಮ್ಮ ಅಜ್ಜನ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ಸಾಕ್ಷಿಯು ಸದರಿ ಎರಡು ಪ್ಲಾಟ್ ಗಳನ್ನು ನಿಡಿ 2 ರಲ್ಲಿ ನೋಡಿ ಗುರುತಿಸಿದ್ದು ಸದರಿ ಭಾಗವನ್ನು **ನಿಡಿ 2ಬಿ** ಎಂದು ಗುರುತಿಸಲಾಯಿತು. ಸದರಿ ಪ್ಲಾಟ್ ಗಳು ಸರ್ವೆ ನಂ.50/ಅ/1ಕ ರಲ್ಲಿ ಮೊದಲ ಭಾಗವಾಗಿರುತ್ತದೆ ಎಂದರೆ ಸರಿ.

4. ದಾವಾ ಆಸ್ತಿಯ ಪಶ್ಚಿಮಕ್ಕೆ ಸರ್ವೆ ನಂ.59 ರ ಆಸ್ತಿ ಇದೆ ಎಂದರೆ ಸಾಕ್ಷಿಯು ರಸ್ತೆ ಇರುವುದಾಗಿ ನುಡಿಯುತ್ತಾರೆ. ಆ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಸೇರಿದ ಪ್ಲಾಟ್ ನಂ.1 ರ ಹಿಂಭಾಗ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯ ನಂತರ ದಕ್ಷಿಣಕ್ಕೆ ಉಳಿದ ಪ್ಲಾಟ್ ಗಳು ಇವೆ ಎಂದರೆ ಸರಿ. ಪ್ಲಾಟ್ ನಂ.1 ರ ದಕ್ಷಿಣದ ಭಾಗಕ್ಕೆ ಪ್ಲಾಟ್ ನಂ.64 ಮತ್ತು 65 ರ ನಡುವೆ ಪ್ಲಾಟ್ ಗಳು ಇವೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಪ್ಲಾಟ್ ನಂ.2 ಇರುತ್ತದೆ, ಉತ್ತರಕ್ಕೆ ರಸ್ತೆ ಇರುತ್ತದೆ, ಪಶ್ಚಿಮಕ್ಕೆ ಪ್ರತಿವಾದಿಯ ಮನೆ ಇದೆ ಎಂದರೆ ಸಾಕ್ಷಿಯು ರಸ್ತೆ ಇರುವುದಾಗಿ ನುಡಿಯುತ್ತಾರೆ. ಸದರಿ ಮನೆಯ ಪಶ್ಚಿಮಕ್ಕೆ ಜೋಯಿಸರಹರಳಹಳ್ಳಿ ರಸ್ತೆ ಇದೆ ಎಂದರೆ ಸಾಕ್ಷಿಯು ದಾವಾ ಆಸ್ತಿಯ ಪಶ್ಚಿಮಕ್ಕೆ ಸದರಿ ರಸ್ತೆ ಇರುವುದಾಗಿ ನುಡಿಯುತ್ತಾರೆ.

5. ದಾವಾ ಪ್ಲಾಟ್ ಸರ್ವೆ ನಂಬರ್ ನ ಪಶ್ಚಿಮ ದಿಕ್ಕಿಗೆ ಹಲವಾರು ಮನೆಗಳನ್ನು ಕಟ್ಟಿಕೊಂಡು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಗಳನ್ನು ಸುಮಾರು 70 ವರ್ಷಗಳಿಂದ ಕಟ್ಟಿಕೊಂಡು ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ತಿಳಿದಾಗಿನಿಂದ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಅವರುಗಳೆಲ್ಲರೂ ಮನೆ ನಿರ್ಮಿಸಿಕೊಂಡು ವಾಸ ಇರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ಮನೆಗಳಿಗೆ ಸರ್ಕಾರದಿಂದ ಪಟ್ಟಾ ನೀಡಿರುವುದಿಲ್ಲ ಎಂದರೆ ಸರಿ. ಸದರಿ ಪಟ್ಟಕ್ಕಾಗಿ ನಿವಾಸಿಗಳು ಸರ್ಕಾರಕ್ಕೆ ಮನವಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನಿವಾಸಿಗಳು ಪಂಚಾಯತಿಗೆ ಕಂದಾಯ ಪಾವತಿ ಮಾಡುವ ಬಗ್ಗೆ ನನಗೆ ಗೊತ್ತಿಲ್ಲ. ಪಂಚಾಯತಿಯಿಂದ ಸದರಿ ಮನೆಗಳಿಗೆ ವಿದ್ಯುತ್ ಮತ್ತು ನೀರಿನ ಸಂಪರ್ಕ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಸದರಿ ಫೋಟೋದಲ್ಲಿ ಕಾಣುವ ಮನೆಗಳು ಸರ್ವೆ ನಂ.50/ಅ/1 ಕ ದ ಪಶ್ಚಿಮಕ್ಕೆ ಇರುವ ಮನೆಗಳು ಎಂದರೆ ಸಾಕ್ಷಿಯು ಹೌದು ಎಂದು ಗುರುತಿಸಿದ್ದು ಸದರಿ ದಾಖಲೆಯನ್ನು **ನಿಡಿ 3** ಎಂದು ಗುರುತಿಸಲಾಯಿತು.

6. ದಾವಾ ಆಸ್ತಿಯ ಪಶ್ಚಿಮಕ್ಕೆ ಹೊಂದಿಕೊಂಡು ಪ್ರತಿವಾದಿಗಳು ಮನೆ ನಿರ್ಮಿಸಿಕೊಂಡು ವಾಸವಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಕಟ್ಟಿಕೊಂಡು ಸುಮಾರು 45 ವರ್ಷಗಳಿಂದ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಗೆ ಗ್ರಾಮ ಪಂಚಾಯಿತಿಯಿಂದ ವಿದ್ಯುತ್ ಬಿಲ್ ಮತ್ತು ಕಂದಾಯ ಪಾವತಿ

ತುಂಬಿಸಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸರ್ವೆ ನಂ.59 ರಲ್ಲಿ ಮನೆ

ಮಂಜೂರಾತಿಗೆ ತಹಶೀಲ್ದಾರವರಿಗೆ ಅರ್ಜಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ದಾವಾ ಆಸ್ತಿಯ ಪಶ್ಚಿಮಕ್ಕೆ ಇರುವ ರಸ್ತೆಯ ನಂತರ ಬರುವ ಆಸ್ತಿಯಲ್ಲಿ ಕೇಳಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಅಳತೆ ಮಾಡಿಸಿಕೊಳ್ಳಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಅಳತೆ ಮಾಡಲು ನಾನು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ಅಳತೆ ಮಾಡಿಸಿಕೊಂಡರೆ ತಕರಾರುಗಳು ಯಾವುದೂ ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಆಸ್ತಿಯಲ್ಲಿ ಕಬ್ಜಾ ಇರುವುದಾಗಿ ನುಡಿಯುತ್ತಾರೆ. ನಾನು ಅಳತೆ ಮಾಡಿಸಿದರೆ ಹೆಚ್ಚುವರಿ ಕಬ್ಜಾ ಇರಬಹುದು ಎಂದರೆ ಸಾಕ್ಷಿಯು ಇದ್ದರೂ ಇರಬಹುದು ಎಂದು ನುಡಿಯುತ್ತಾರೆ.

7. ದಾಖಲೆಗಳ ಪ್ರಕಾರ ದಾವಾ ಆಸ್ತಿಯನ್ನು ಅಳತೆ ಮಾಡಿಸಿ ಹದ್ದುಬಸ್ತು ಮಾಡಿಸಿಕೊಳ್ಳಲು ನನಗೆ ಯಾವುದೇ ತಕರಾರು ಇರುವುದಿಲ್ಲ. ನಾನು ಪ್ರತಿವಾದಿಗಳ ಆಸ್ತಿಗಳನ್ನು ಅತಿಕ್ರಮಿಸಿಕೊಂಡು ಕಬ್ಜಾ ಪಡೆಯುವ ಉದ್ದೇಶದಿಂದ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.